# ಛಲಗಾತಿ  ದ್ಯುತಿ ಚಾಂದ್

ಬರೋಬ್ಬರಿ 36 ವರ್ಷಗಳ ನಂತರ ಒಲಿಂಪಿಕ್ಸ್‌ನ ಮಹಿಳೆಯರ 100 ಮೀಟರ್ಸ್ ವಿಭಾಗದಲ್ಲಿ ಭಾರತದ ಸ್ಪರ್ಧಿ ಓಡುವುದನ್ನು ನೋಡುವ ಅವಕಾಶ ಈ ಬಾರಿ ಲಭಿಸಲಿದೆ.

ಒಡಿಶಾದ ಗೋಪಾಲಪುರ ಗ್ರಾಮದ ದ್ಯುತಿ ಚಾಂದ್ ಅವರೇ ಆ ಅಥ್ಲೀಟ್. 1980ರ ಒಲಿಂಪಿಕ್ಸ್‌ನಲ್ಲಿ ಪಿ.ಟಿ. ಉಷಾ ಅವರ ನಂತರ 100 ಮೀಟರ್ಸ್ ಓಟಕ್ಕೆ ಭಾರತದಿಂದ ಯಾರೂ ಅರ್ಹತೆ ಪಡೆದಿರಲಿಲ್ಲ. ಆದರೆ ದ್ಯುತಿ ಆ ಸಾಧನೆ ಮಾಡಿದ್ದಾರೆ. ಅದರ ಹಿಂದೆ ಅವರು ಅನುಭವಿಸಿದ ನೋವು, ಪಟ್ಟ ಶ್ರಮ ಸಣ್ಣದಲ್ಲ. ಬಡ ಕುಂಟುಬದಲ್ಲಿ ಹುಟ್ಟಿದ ದ್ಯುತಿ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ 11.08 ಸೆಕೆಂಡುಗಳಲ್ಲಿ 100 ಮೀಟರ್ ಓಡಿ ರಾಷ್ಟ್ರೀಯ ಚಾಂಪಿಯನ್ ಆದವರು. 2013 ರಲ್ಲಿ ಪುಣೆಯಲ್ಲಿ ನಡೆದಿದ್ದ ಏಷ್ಯನ್ ಅಥ್ಲೆಟಿಕ್ಸ್‌ನ 200 ಮೀಟರ್ಸ್ ಓಟದಲ್ಲಿ ಕಂಚಿನ ಪದಕ ಗಳಿಸಿದ್ದರು.  ಆನಂತರದ ದಿನಗಳೇ ಅವರಿಗೆ ದುಃಸ್ವಪ್ನವಾದವು. ಅವರ ದೇಹದಲ್ಲಿ ಪುರುಷರ ಗುಣಲಕ್ಷಣಗಳು ಇರುವ ಹಾರ್ಮೋನುಗಳ ಪ್ರಮಾಣ ಹೆಚ್ಚಿದ್ದು ಮಹಿಳೆಯರ ವಿಭಾಗದಲ್ಲಿ ಸ್ಪರ್ಧಿಸುವಂತಿಲ್ಲ ಎಂದು ಕಾಮನ್‌ವೆಲ್ತ್ ಕೂಟಕ್ಕೆ ಹೊರಟಿದ್ದ ಭಾರತ ಅಥ್ಲೆಟಿಕ್ಸ್ ತಂಡದಿಂದ ದ್ಯುತಿ ಅವರನ್ನು ಕೈಬಿಡಲಾಯಿತು.

ಮಾಜಿ ಅಥ್ಲೀಟ್ ಶಾಂತಿ ಸೌಂದರರಾಜನ್ ಮತ್ತು ಕಾನೂನು ದ್ಯುತಿ ಪರವಾಗಿ ನಿಂತಿತು. ಕೆಲವು ತಿಂಗಳುಗಳ ಹಿಂದೆ ಅವರನ್ನು ಮಹಿಳಾ ಅಥ್ಲೀಟ್ ಎಂದು ಕೋರ್ಟ್ ಆಫ್ ಆರ್ಬಿಟ್ರೇಷನ್ ಫಾರ್ ಸ್ಪೋರ್ಟ್ಸ್ ತೀರ್ಪು ನೀಡಿತು. ಸ್ವಲ್ಪ ಸಮಯದಲ್ಲಿ ಇದ್ದ ಅರ್ಹತಾ ಅವಕಾಶಗಳಲ್ಲಿ ಶಕ್ತಿ ಮೀರಿ ಪ್ರಯತ್ನಿಸಿದ ದ್ಯುತಿ 100 ಮೀಟರ್ಸ್ ಓಟಕ್ಕೆ ಅರ್ಹತೆ ಪಡೆದುಕೊಂಡಿದ್ದಾರೆ. ಆದರೆ 200 ಮೀಟರ್ ವಿಭಾಗದಲ್ಲಿ ಅವರಿಗೆ ಅರ್ಹತೆ ಗಿಟ್ಟಲಿಲ್ಲ.  ರಿಯೊದಲ್ಲಿ ಅವರಿಗೆ ಪದಕ ಒಲಿಯುವುದೋ  ಇಲ್ಲವೊ ಗೊತ್ತಿಲ್ಲ. ಆದರೆ,  ಅವರ ಛಲದ ಓಟಕ್ಕೆ ಮನ್ನಣೆ ಸಿಗುವುದಂತೂ ಖಚಿತ.

ಇನ್ನುಳಿದಂತೆ  ವನಿತೆಯರ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ ವನಿತೆಯ ವಿಭಾಗದಲ್ಲಿ ಶ್ರಬನಿ ನಂದಾ (200 ಮೀ), ನಿರ್ಮಲಾ ಶೆರೊನ್ (400ಮೀ), ಟಿಂಟು ಲೂಕಾ (800ಮೀ), ಲಲಿತಾ ಬಾಬರ್, ಸುಧಾ ಸಿಂಗ್ (3000 ಮೀ ಸ್ಟೀಪಲ್‌ಚೇಸ್), ಜಿಸ್ನಾ ಮ್ಯಾಥ್ಯೂಸ್, ಎಂ.ಆರ್. ಪೂವಮ್ಮ, ಅನಿಲ್ಡಾ ಥಾಮಸ್ , ದೇವಶ್ರೀ ಮಜುಮದಾರ್, ನಿರ್ಮಲಾ ಶೇರಾನ್ (4X400ಮೀ). ಒ.ಪಿ. ಜೈಶಾ, ಕವಿತಾ ರಾವುತ್, ಸುಧಾಸಿಂಗ್ (ಮ್ಯಾರಥಾನ್), ಕುಶ್‌ಬೀರ್ ಕೌರ್. ಸಪ್ನಾ ಪುನಿಯಾ (20 ಕಿ.ಮೀ ನಡಿಗೆ), ಮನಪ್ರೀತ್ ಕೌರ್ (ಶಾಟ್‌ಪಟ್), ಸೀಮಾ ಅಂಟಿಲ್ (ಡಿಸ್ಕಸ್ ಥ್ರೋ) ಅವರು ಭಾರತದ ಅಭಿಯಾನವನ್ನು ಮುಂದುವರಿಸುವರು.



| ಒಲಿಂಪಿಕ್ಸ್ 2016 | |
|---|---|
| ಆತಿಥೇಯ ದೇಶ | ಬ್ರೆಜಿಲ್ |
| ನಗರ | ರಿಯೊ ಡಿ ಜನ್ಯೆರೊ |
| ಕ್ರೀಡಾಂಗಣ | ಮರಕಾನಾ |
| ಸ್ಪರ್ಧಿಸುವ ದೇಶಗಳು | 200 |
| ಅಥ್ಲೀಟ್‌ಗಳು | 10,500 |
| ಕ್ರೀಡೆಗಳು | 28 |
| ಹೊಸ ಸೇರ್ಪಡೆ | ಗಾಲ್ಫ್, ರಗ್ಬಿ |
| ಸ್ಪರ್ಧೆಗಳು | 306 |
| ಉದ್ಘಾಟನೆ | ಆಗಸ್ಟ್ 5 |
| ಸಮಾರೋಪ | ಆಗಸ್ಟ್ 21 |
| ಮ್ಯಾಸ್ಕಾಟ್ | ವಿನಿಸಿಯಸ್ |

ಬಾರಿ  ಕೊಂಚ ಕಡಿಮೆಯಾಗಿದೆ. ಕ್ರೀಡಾಪಟುಗಳ ಮೇಲೆ ಹಣ ವಿನಿಯೋಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಸ್ವಲ್ಪ ಉದಾರಿಗಳಾಗಿರುವುದು ಒಳ್ಳೆಯ ಬೆಳವಣಿಗೆ. ‘ಟಾಪ್ ಯೋಜನೆ’ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ) ಮೂಲಕ ಒಲಿಂಪಿಕ್ಸ್ ಸ್ಪರ್ಧಿಗಳಿಗೆ ಒಂದು ವರ್ಷ ಮೊದಲೇ ಧನಸಹಾಯ ನೀಡಿದ್ದು ಕೂಡ ಪೂರ್ವಾಭ್ಯಾಸಕ್ಕೆ ಇಂಬು ನೀಡಿದ್ದು ಸುಳ್ಳಲ್ಲ.

‘ಭಾರತ ತಂಡವು ಲಂಡನ್‌ನಲ್ಲಿ ಗೆದ್ದ ಪದಕಗಳ ಸಂಖ್ಯೆಯ ಡಬಲ್ ಪದಕಗಳನ್ನು ರಿಯೊದಲ್ಲಿ ಜಯಿಸಲಿದೆ’ ಎಂದು ಸ್ಟಾರ್ ಸ್ಪೋರ್ಟ್ಸ್ ವೀಕ್ಷಕ ವಿವರಣೆಗಾರ ಒಲಿಂಪಿಯನ್ ಪ್ರಕಾಶ್ ಪಡುಕೋಣೆ  ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಹೋದ ಒಲಿಂಪಿಕ್ಸ್‌ನಲ್ಲಿ ಆರು ಪದಕಗಳನ್ನು ಗೆದ್ದಿದ್ದು ಭಾರತದ ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ. ನಮಗಿಂತಲೂ ಚಿಕ್ಕ ದೇಶಗಳಾದ ಟುನಿಶಿಯಾ, ಗ್ರೆನೆಡಾ, ಉಗಾಂಡಾ, ಬಹಾಮಾ, ಲೆಟಿವಿಯಾ ತಂಡಗಳು ಇನ್ನು ಹೆಚ್ಚಿನ  ಸಾಧನೆ ಮಾಡಿದ್ದವು.

### ಹಾಕಿ ಅವಿಶ್ವಾಸ ಬಿಟ್ಹಾಕಿ..!

1980ರ ಮಾಸ್ಕೋ ಒಲಿಂಪಿಕ್ಸ್ ನಂತರ ಭಾರತದ ಹಾಕಿ ತಂಡವು ಪದಕದ ಸನಿಹವೂ ಹೋಗಿಲ್ಲ. ಎಂಟು ಚಿನ್ನದ ಪದಕಗಳು, ಒಂದು ಬೆಳ್ಳಿ, ಎರಡು ಕಂಚಿನ ಪದಕಗಳ ವಿಜೇತ ಭಾರತದ ಹಾಕಿ ಕ್ರೀಡೆಯೂ ಪಾತಾಳ ಕಂಡಿತ್ತು. 2008ರ ಬೀಜಿಂಗ್ ಒಲಿಂಪಿಕ್ಸ್‌ಗೆ ಅರ್ಹತೆಯನ್ನೇ ಪಡೆದಿರಲಿಲ್ಲ. ಲಂಡನ್‌ಗೆ ಪ್ರಯಾಸಪಟ್ಟು ಅರ್ಹತೆ ಪಡೆದಿತ್ತು. ನಂತರ ಕೂಟದಲ್ಲಿ 12ನೇ (ಕೊನೆಯ) ಸ್ಥಾನದಲ್ಲಿ ಉಳಿದಿತ್ತು.

ಆದರೆ, ಕಳೆದ ನಾಲ್ಕು ವರ್ಷಗಳಲ್ಲಿ ಅದೇ ತಂಡವು ಹಲವು ಮಹತ್ವದ ಸಾಧನೆಗಳನ್ನು ಮಾಡಿದೆ. ಅದರಿಂದಾಗಿ 36 ವರ್ಷಗಳ ನಂತರ ಹಾಕಿ ಆಟಗಾರರ ಮೇಲೆ ವಿಶ್ವಾಸ ಮೂಡಿದೆ.

ಬರೋಬ್ಬರಿ ಒಂದು ವರ್ಷದ ಹಿಂದೆ ತಂಡದ ಕೋಚ್ ಪಾಲ್ ವಾನ್ ಆಸ್ ಅವರನ್ನು ಹಾಕಿ ಇಂಡಿಯಾ ಕಿತ್ತು ಹಾಕಿದ್ದು ವಿವಾದಕ್ಕೆ ಕಾರಣವಾಗಿತ್ತು. ನಂತರ ಕೋಚ್ ಆಗಿ ನೇಮಕಗೊಂಡ ರೋಲಂಟ್ ಒಲ್ಟಮನ್ಸ್ ಅವರು ತಂಡವು ಹಳಿ ತಪ್ಪದಂತೆ ನೋಡಿಕೊಂಡರು. ಕೇರಳದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ನಾಯಕತ್ವ ವಹಿಸಿಕೊಂಡಿದ್ದಾರೆ. ಅವರ ಸಾರಥ್ಯದಲ್ಲಿ ತಂಡವು ಈಚೆಗೆ ಲಂಡನ್‌ನಲ್ಲಿ ನಡೆದಿದ್ದ ಚಾಂಪಿಯನ್ಸ್ ಟ್ರೋಫಿಯಲ್ಲಿ



| ವರ್ಷ | 2012 | 2008 | 2004 |
|---|---|---|---|
| ದೇಶ | ಲಂಡನ್ | ಬೀಜಿಂಗ್ | ಅಥೆನ್ಸ್ |
| ಒಟ್ಟು | 83 | 56 | 73 |
| ಪುರುಷ | 60 | 31 | 48 |
| ಮಹಿಳೆ | 23 | 25 | 25 |
| ಸ್ಪರ್ಧೆಗಳು | 55 | 48 | 14 |